# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 223/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-03-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಅನ್ನಪ್ಪ ಗಿಡದಹುಬ್ಬಳ್ಳಿ | **ಪ್ರಾ.ಸಾ ಃ 06** |
| **ತಂದೆ ಃ ಗಂಡ ಹೆಸರು** | ಃ ಮಹದೇವಪ್ಪ | **ಚಾ.ಸಾ ಃ 09** |
| **ವಯಸ್ಸು** | ಃ 45 ವರ್ಷ | |
| **ಉದ್ಯೋಗ** | ಃ ವ್ಯವಸಾಯ | |
| **ವಾಸಸ್ಥಳ** | ಃ ತುಮರಿಕೊಪ್ಪ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1, 4 ರಿಂದ 8, 10 ರಿಂದ 15 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

ದಿನಾಂಕ 07.03.2023 ರಂದು ಹೋಳಿ ಹಬ್ಬದ ದಿನದಂದು ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಚಾಸಾ-4 ರವರ ಜೊತೆಗೆ ಜಗಳ ಮಾಡುತ್ತಿದ್ದರು. ಆ ಸಮಯದಲ್ಲಿ ಚಾಸಾ-12 ರವರು ಅಂಗಡಿ ಕಟ್ಟಿ ಹತ್ತಿರ ಕುಳಿತಿದ್ದು ಜಗಳ ಬಿಡಿಸಲು ಹೋಗಿರುತ್ತಾರೆ. ಆಗ ಆರೋಪಿತರು ಜಗಳ ಬಿಡಿಸಲು ಹೋದ ಚಾಸಾ-12 ರವರಿಗೆ ಹೊಡೆಯಲು ಪ್ರಾರಂಭಿಸಿರುತ್ತಾರೆ. ನಾನು ಜಗಳ ಬಿಡಿಸಲು ಹೋದಾಗ 7 ನೇ ಆರೋಪಿ ಕಟ್ಟಿಗೆಯಿಂದ ನನ್ನ ಎಡಗೈ ತೋಳಿನ ಮೇಲೆ ಹೊಡೆದಿರುತ್ತಾನೆ. ಚಾಸಾ-8, 14 ಮತ್ತು 15 ರವರು ಜಗಳ ಬಿಡಿಸಲು ಬಂದಾಗ ಚಾಸಾ-8 ರವರ ಎದೆಗೆ ಆರೋಪಿತರಲ್ಲಿ ಯಾರೋ ಕಲ್ಲಿನಿಂದ ಹೊಡೆದಿರುತ್ತಾರೆ. ನನ್ನ ತಮ್ಮ ಚಾಸಾ-6 ರವರಿಗೂ ಸಹ ಗಾಯಗಳಾಗಿದ್ದವು. ನಾವು ಖಾಸಗಿ ವಾಹನದಲ್ಲಿ ಕಲಘಟಗಿ ಸರಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇವೆ. ಈ ಬಗ್ಗೆ ಚಾಸಾ-1 ರವರು ದೂರು ನೀಡಿರುತ್ತಾರೆ. ಜಗಳ ಸಾಯಂಕಾಲ 6-00 ಗಂಟೆಗೆ ಆಗಿರುತ್ತದೆ. ಘಟನೆ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನಮ್ಮ ಮೇಲೆ ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲು-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಮುದ್ದೆಮಾಲು-1 ರಲ್ಲಿ ಒಟ್ಟು 8 ಬಡಿಗೆಗಳಿದ್ದು ಅವುಗಳಲ್ಲಿಯ ಒಂದು ಬಡಿಗೆಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಮುದ್ದೆಮಾಲು-1(1) ಎಂದು ಗುರುತಿಸಲಾಯಿತು.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,** ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07.03.2023 ರಂದು ಸಾಯಂಕಾಲ 6-30 ಕ್ಕೆ ಆರೋಪಿತರು ಚಾಸಾ-4 ರವರ ಜೊತೆಗೆ ತಂಟೆ ಮಾಡಿ ಹಲ್ಲೆ ಮಾಡುತ್ತಿದ್ದರು ಅಂದರೆ ನಿಜ. ಜಗಳ ಆಗುವಾಗ ನಾನು, ಚಾಸಾ-1, 5 ರಿಂದ 8, 10 ರಿಂದ 13 ರವರು ಜಗಳ ಬಿಡಿಸಲು ಹೋಗಿದ್ದೆವು ಅಂದರೆ ನಿಜ. ಆರೋಪಿತರು ಜಗಳ ಬಿಡಿಸಲು ನೀವು ಯಾರು ಇದರಲ್ಲಿ ಬರಬೇಡಿ ಎಂದು ನಮಗೆ

ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿರುತ್ತಾರೆ ಅಂದರೆ ನಿಜ. ಚಾಸಾ-8 ರವರು ತಂಟೆ ಮಾಡಬೇಡರಿ, ಎಲ್ಲರೂ ಸೇರಿಕೊಂಡು ಬಗೆಹರಿಸೋಣ ಎಂದು ಬುದ್ಧಿವಾದ ಹೇಳಿದರೂ ಕೂಡಾ ಆರೋಪಿತರು ಕೇಳಲಿಲ್ಲ ಅಂದರೆ ನಿಜ. ಆರೋಪಿತರು ತಮ್ಮ ಕೈಗಳಲ್ಲಿ ಬಡಿಗೆ ಹಾಗೂ ಕಲ್ಲುಗಳನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ಚಾಸಾ-8 ರವರಿಗೆ ನಿನಗೆ ಸೊಕ್ಕು ಬಹಳ ಇದೆ ಸೂಳೆಮಗನೆ ಎಂದು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ ಅಂದರೆ ನಿಜ. 2 ನೇ ಆರೋಪಿ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಲ್ಲಿನಿಂದ ಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಚಾಸಾ-6 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಗಳಿಂದ ಹೊಡಿ ಬಡಿ ಮಾಡಿರುತ್ತಾರೆ ಅಂದರೆ ನಿಜ.

2 ನೇ ಆರೋಪಿ ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಮಾನಭಂಗ ಮಾಡಿರುತ್ತಾನೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ನಿಜ. ಚಾಸಾ-11 ರವರಿಗೆ 1 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ, ಉಳಿದ ಆರೋಪಿತರು ತಮ್ಮ ಕೈಯಿಂದ, ಬಡಿಗೆಯಿಂದ ಮೈಕೈಗಳಿಗೆ ಹಲ್ಲೆ ಮಾಡಿರುತ್ತಾರೆ ಅಂದರೆ ನಿಜ. 4 ನೇ ಆರೋಪಿ ಬಡಿಗೆಯಿಂದ ಚಾಸಾ-10 ರವರ ಮೇಲೆ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 7 ನೇ ಆರೋಪಿಯು ಚಾಸಾ-13 ರವರಿಗೆ ತನ್ನ ಕೈಯಲ್ಲಿದ್ದ ಬಡಿಗೆ ಹಾಗೂ ಕೈಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 5 ಮತ್ತು 6 ನೇ ಆರೋಪಿತರು ತಮ್ಮ ಕೈಯಲ್ಲಿ ಇದ್ದ ಬಡಿಗೆಯಿಂದ ಚಾಸಾ-12 ರವರಿಗೆ ಕೈಗಳಿಂದ ಮತ್ತು ಬಡಿಗೆಗಳಿಂದ ಹೊಡೆದು ಗಾಯ ಪಡಿಸಿರುತ್ತಾರೆ ಅಂದರೆ ನಿಜ. 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಮೈಮೇಲೆ ಹಲ್ಲೆ ಮಾಡಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಿರುತ್ತಾರೆ ಅಂದರೆ ನಿಜ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಅಂದರೆ ನಿಜ. ಚಾಸಾ-14 ಮತ್ತು 15 ರವರು ಜಗಳ ಬಿಡಿಸಿಕೊಂಡಿರುತ್ತಾರೆ ಅಂದರೆ ನಿಜ. ಆರೋಪಿತರು ಹೋಗುವಾಗ ಈಗ ಉಳಿದುಕೊಂಡಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**